# Telephone conversation between PM and President of Brazil

April 04, 2020

---

## ಪ್ರಧಾನ  ಮಂತ್ರಿ ಮತ್ತು ಬ್ರೆಜಿಲ್ ಅಧ್ಯಕ್ಷರ ನಡುವೆ ದೂರವಾಣಿ ಸಂಭಾಷಣೆ

ಏಪ್ರಿಲ್ 04, 2020

ಪ್ರಧಾನ  ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಹೆಚ್. ಇ. ಜೈರ್ ಮೆಸ್ಸಿಯಾಸ್ ಬೋಲ್ಸನಾರೊ, ಬ್ರೆಜಿಲ್ ನ  ಅಧ್ಯಕ್ಷರೊಂದಿಗೆ  ಇಂದು ದೂರವಾಣಿ ಸಂಭಾಷಣೆ ನಡೆಸಿದರು. ಕೋವಿಡ್-19 ಸಾಂಕ್ರಾಮಿಕ ರೋಗ ಹರಡಿದ ಹಿನ್ನೆಲೆಯಲ್ಲಿ ಇಬ್ಬರು ನಾಯಕರು ಜಾಗತಿಕ ಪರಿಸ್ಥಿತಿ ಕುರಿತು ಚರ್ಚಿಸಿದರು.

ಕೋವಿಡ್-19 ನಿಂದಾಗಿ ಬ್ರೆಜಿಲ್‌ನಲ್ಲಿ ಸಂಭವಿಸಿದ ಪ್ರಾಣಹಾನಿ ಕುರಿತು ಪ್ರಧಾನ  ಮಂತ್ರಿ ಸಂತಾಪ ಸೂಚಿಸಿದ್ದಾರೆ. ಈ ಸಮಯದಲ್ಲಿ ಪ್ರತಿಯೊಬ್ಬ ಭಾರತೀಯನ ಪ್ರಾರ್ಥನೆಯು ಬ್ರೆಜಿಲ್ನ ಸ್ನೇಹಪರ ಜನರೊಂದಿಗೆ ಇತ್ತು ಎಂದು ಅವರು ಹೇಳಿದರು.

ಕೋವಿಡ್-19 ನಿಂದ ಉಂಟಾಗುವ ಗಂಭೀರ ಬಿಕ್ಕಟ್ಟುಗಳನ್ನು ತಗ್ಗಿಸಲು ಉಭಯಪಕ್ಷೀಯವಾಗಿ ಮತ್ತು ಬಹುಪಕ್ಷೀಯ ಸಾಂಸ್ಥಿಕ ಚೌಕಟ್ಟಿನಲ್ಲಿ ಭಾರತ ಮತ್ತು ಬ್ರೆಜಿಲ್ ನಡುವಿನ ನಿಕಟ ಸಹಕಾರದ ಮಹತ್ವವನ್ನು ಇಬ್ಬರು ನಾಯಕರು ಒತ್ತಿ ಹೇಳಿದರು. ಕೋವಿಡ್ ನಂತರದ ಜಗತ್ತಿಗೆ ಜಾಗತೀಕರಣದ ಹೊಸ ಮಾನವ ಕೇಂದ್ರಿತ ಪರಿಕಲ್ಪನೆಯನ್ನು ರೂಪಿಸುವ ಅಗತ್ಯವನ್ನು ಅವರು ಒಪ್ಪಿಕೊಂಡರು.

ಈ ಕಷ್ಟದ ಸಮಯದಲ್ಲಿ ಬ್ರೆಜಿಲ್ ಅಧ್ಯಕ್ಷರಿಗೆ ಸಾಧ್ಯವಿರುವ ಎಲ್ಲಾ ಬೆಂಬಲವನ್ನು ಪ್ರಧಾನ  ಮಂತ್ರಿ ಭರವಸೆ ನೀಡಿದರು. ಕೋವಿಡ್-19 ಪರಿಸ್ಥಿತಿ ಮತ್ತು ಅದರ ಉದಯೋನ್ಮುಖ ಸವಾಲುಗಳಿಗೆ ಸಂಬಂಧಿಸಿದಂತೆ ತಮ್ಮ ಅಧಿಕಾರಿಗಳು ನಿಯಮಿತವಾಗಿ ಸಂಪರ್ಕದಲ್ಲಿರುತ್ತಾರೆ ಎಂದು ಅವರು ಒಪ್ಪಿಕೊಂಡರು.

ಈ ವರ್ಷದ ಭಾರತದ 70ನೇ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಬ್ರೆಜಿಲ್ ಅಧ್ಯಕ್ಷರು ಭಾಗವಹಿಸಿದ್ದನ್ನು ಕೃತಜ್ಞತೆಯಿಂದ ಪ್ರಧಾನ  ಮಂತ್ರಿಯವರು  ನೆನಪಿಸಿಕೊಂಡರು, ಭಾರತ-ಬ್ರೆಜಿಲ್ ಸ್ನೇಹದಲ್ಲಿ ಹೆಚ್ಚುತ್ತಿರುವ ಚೈತನ್ಯದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಕಳೆದ ವರ್ಷದಲ್ಲಿ ಬ್ರಿಕ್ಸ್‌ನ ನಾಯಕತ್ವಕ್ಕಾಗಿ ಬ್ರೆಜಿಲ್‌ಗೆ ಧನ್ಯವಾದ ಅರ್ಪಿಸಿದರು.

**ನವ ದೆಹಲಿ**

**ಏಪ್ರಿಲ್ 04, 2020**

DISCLAIMER : This is an approximate translation. The original is available in English on MEA’s website and may be referred to as the official press release.